ಹೊಂಡಕ್ಕೆ ಬರುತ್ತವೆ. ಅವೇನಾದರೂ ಗಲಾಟೆ ಮಾಡಿದರೆ ತಾತ, 'ಏ ಸುಮ್ಮನೆ ನೀರು ಕುಡಿದು ಹೋಗ್ರೋ...' ಎಂದು ಗದರುತ್ತಾನೆ. ತಾತನ ದನಿ ಕೇಳಿದ ಹುಲಿಗಳು ಬಾಲ ಮುದುರಿಕೊಂಡು ಜಾಗ ಖಾಲಿ ಮಾಡುವ ದೃಶ್ಯವನ್ನು ಊಹಿಸಿಕೊಳ್ಳುವುದೇ ರೋಚಕ ಅನುಭವ. ತಾತನ ಇಂತಹ ತಾಕತ್ತನ್ನು ಕಂಡವರಾಗಲೀ, ಅನುಮಾನಿಸಿದವರಾಗಲೀ ಇಲ್ಲ. ದೈನಂದಿನ ನೀರಸ ಬದುಕಿನಿಂದ ಬೇಸರಿಸುತ್ತಿದ್ದ ಜನ ಭೈರಪ್ಪ ತಾತನ ಅತಿರೇಕದ ಹೇಳಿಕೆಗಳಿಗೆ ತಮ್ಮ ಕಲ್ಪನೆ ಮತ್ತು ಸುಳ್ಳುಗಳನ್ನು ಬೆರೆಸಿ ಚಪ್ಪರಿಸುತ್ತಿದ್ದರು. ಇಂತಿಪ್ಪ ತಾತ ಇಂದು ಇತಿಹಾಸ; ಕೆಲವೇ ವರ್ಷಗಳಲ್ಲಿ ಪುರಾಣವಾದರೂ ಅಚ್ಚರಿಯಿಲ್ಲ. ಈಗಾಗಲೇ ಆತನ ಹೆಸರಿನಲ್ಲಿ ಆ ಊರು ಜಾತ್ರೆ ಮಾಡುತ್ತಿದೆ.



ತಾತ ತೀರಿಕೊಂಡ ಅನಂತರ ಆ ಗುಡ್ಡದ ಮೇಲಿನ ಗವಿ ಬಳಿ ಹಗಲು ಹೊತ್ತಿನಲ್ಲಿ ಹರಕೆ ತೀರಿಸುವ ನೆಪದಲ್ಲಿ ಗುಂಪು ಸೇರುವ ಊರವರು ಮಂಡಾಳು ಒಗ್ಗರಣೆ, ಹಿಟ್ಟಚ್ಚಿದ ಮೆಣಸಿನಕಾಯಿ ಮಾಡಿಕೊಂಡು ಮನಸಾರೆ ತಿಂದು ವಿರಮಿಸುತ್ತಾರೆ. ಹಳ್ಳಿಯ ಜನ ಭೈರಪ್ಪ ತಾತನ ತಾಣಕ್ಕೆ ನೀಡುವ ಭೇಟಿಗೆ ಮೂಲ ಪ್ರೇರಣೆಯಾಗಿ ಕೆಲಸಮಾಡುವ ಭಕ್ತಿ ಮತ್ತು ಬಾಯಿಚಪಲದ ಪ್ರಮಾಣವನ್ನು ಬೇರ್ಪಡಿಸುವುದಾಲೀ, ಅಳೆಯುವುದಾಗಲೀ ಅಸಾಧ್ಯದ ಮಾತು. ಅವರೆಲ್ಲಾ ಸಂಜೆ ಹೊತ್ತಿಗೆ ಚಹಾ ಸೇವಿಸಿಯೇ ಕೆಳಗಿಳಿಯುವುದು.

ಕಾರ್ತೀಕ ಮಾಸದ ಒಂದು ಬೆಳಗಿನ ಜಾವ ಉದ್ದ ಕೂದಲಿನ, ಕಡುಗಪ್ಪು ಮೈಬಣ್ಣದ, ಅನೇಕ ಬಗೆಯ ಸಾಮಾನು ಸರಂಜಾಮು ಹೊತ್ತ ಹಗಲು ವೇಷಗಾರರ ತಂಡವೊಂದು ಊರಿಗೆ ಬಂದಿಳಿಯಿತು. ಒಂದೇ ಕುಟುಂಬದಂತೆ ಕಾಣುತ್ತಿದ್ದ ಆ ತಂಡದಲ್ಲಿ ಹಿರಿಯರು, ಹರೆಯದವರು, ಮಕ್ಕಳು, ಮಹಿಳೆಯರು ತುಂಬಿ ತುಳುಕುತ್ತಿದ್ದರು. ಹಿಂದೆ ವರ್ಷಕ್ಕೊಮ್ಮೆಯಾದರೂ ಊರಿಗೆ ಬರುತ್ತಿದ್ದ ಹಗಲು ವೇಷಗಾರರಿಗೆ ಅವರು ಬಯಸಿದಷ್ಟು ದಿನ ತಂಗಲು ಹಳ್ಳದರಾಯನ ಗುಡಿ ಪ್ರಶಸ್ತವಾಗಿತ್ತು. ಊರವರೂ ಅಷ್ಟೇ ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದರು.

ಅದೇಕೋ ಈ ತಂಡ ಕಳೆದ ಹತ್ತು ವರ್ಷಗಳಿಂದ ಇತ್ತ ತಿರುಗಿ ನೋಡಿರಲಿಲ್ಲ. ಈ ಸುದೀರ್ಘ ಅವಧಿಯಲ್ಲಿ ತುಂಬಿ ಹರಿಯುತ್ತಿದ್ದ ನಾರಿಹಳ್ಳವೇ ನೀರಡಿಸಿ ಬಳಲುವಂತಾಗಿದೆ. ಉಕ್ಕು ಕಾರ್ಖಾನೆಯ ಮಾಲೀಕರು ಊರೊಳಗೊಂದು ಮಂದಿರ ಕಟ್ಟಿಸಿದ್ದರಿಂದ ಜನ ಅಲ್ಲಿಯೇ ಮುಗಿಬಿದ್ದರು. ಮೇಣ ಮೆತ್ತಿಕೊಂಡ ಕಾಡುಕಲ್ಲಿನ ಹಳೆಯ ಹನುಮಪ್ಪನಿಗಿಂತ ಮಿರಿಮಿರಿ ಮಿಂಚುವ ಅಮೃತಶಿಲೆಯ ಹೊಸ ದೇವರು ಜನರಲ್ಲಿ ಹೆಚ್ಚಿನ ಭರವಸೆ ಹುಟ್ಟಿಸಿದ.